Print

# Karnataka Lokayukta

**(Under Section 7 of the Karnataka Lokayukta Act, 1984)**

| | |
|---|---|
| CASE NUMBER : | **COMPT/UPLOK/GLB/4940/2023** |
| District : | **Raichur UPLOK-2** |

**BY :**

**1. SUO MOTO**

As per the Order of Honourable Upa Lokayukta, dated 29-08-2023.

Mobile/Landline:

**COMPLAINANT/S**

**AGAINST :**

**1. Deputy Director**

Public Instruction Department, Raichur District.

**RESPONDENT/S**

| | |
|---|---|
| **Allegation/Grievance Brief :** | Mal administration. |
| Received From : | Honourable UpaLokayukta Section, dated 30-08-2023. |
| Received On : | 30-08-2023 |

30/08/2023

**Seal and Signature**

ಸಹಾಯಕ ನಿಬಂಧಕರು
ಕಾನೂನು ಅಭಿಪ್ರಾಯ
ದೂರು ವಿಭಾಗ
ಕರ್ನಾಟಕ ಲೋಕಾಯುಕ್ತ ಕಛೇರಿ
ಬೆಂಗಳೂರು-೧.

| | |
|---|---|
| **Complaint stands allotted to :** | **ARE-5** |

**SCRUTINY AND OPINION**

ಸಂಖ್ಯೆ:ಸ್ವಯಂ ಪ್ರೇರಿತ ದೂರು/ಉಪಲೋಕಾಯುಕ್ತ-2 ದಿನಾಂಕ:29/08/2023

## ಆದೇಶ

1. ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆ, ದಿನಾಂಕ:18/08/2023 ರಲ್ಲಿ **"ನೋಂದಣಿ ಇಲ್ಲದೆ ನಡೆಯುತ್ತಿವೆ ಶಾಲೆ। ಕನ್ನಡ ಮಾಧ್ಯಮ ಹೆಸರಿನಲ್ಲಿ ಇಂಗ್ಲಿಷ್ ಮಾಧ್ಯಮ ಬೋಧನೆ, ಕಲ್ಯಾಣದಲ್ಲಿವೆ 103 ಅನಧಿಕೃತ ಶಾಲೆ"** ಎಂಬ ಶೀರ್ಷಿಕೆಯಡಿಯಲ್ಲಿ ಈ ಕೆಳಕಂಡಂತೆ ವರದಿ ಪ್ರಕಟವಾಗಿರುತ್ತದೆ. ಸದರಿ ವರದಿಯಲ್ಲಿನ ಅಂಶಗಳನ್ನು ಈ ಕೆಳಕಂಡಂತೆ ಮರು ಮುದ್ರಿಸಲಾಗಿದ್ದು, ಅದನ್ನು ಯಥಾವತ್ತಾಗಿ ಓದಬಹುದಾಗಿರುತ್ತದೆ:-

12 | ಶುಕ್ರವಾರ, 18 ಆಗಸ್ಟ್ 2023, ಬೆಂಗಳೂರು | ರಾಜ್ಯ | STATE | ವಿಜಯ ಕರ್ನಾಟಕ VK

ನೋಂದಣಿ ಇಲ್ಲದೆ ನಡೆಯುತ್ತಿವೆ ಶಾಲೆ । ಕನ್ನಡ ಮಾಧ್ಯಮ ಹೆಸರಲ್ಲಿ ಇಂಗ್ಲಿಷ್ ಮಾಧ್ಯಮ ಬೋಧನೆ

### ಕಲ್ಯಾಣದಲ್ಲಿವೆ 103 ಅನಧಿಕೃತ ಶಾಲೆ!

■ ವೆಂಕಟೇಶ ನಗನೂರು ಕಲಬುರಗಿ

Venkatesh.narasappa@timesgroup.com

ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಬರೋಬ್ಬರಿ 103 ಅನಧಿಕೃತ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇಂತಹ ಶಾಲೆಗಳ ವಿರುದ್ಧ ಶಿಕ್ಷಣ ಇಲಾಖೆ ಕ್ರಮಕ್ಕೆ ಮುಂದಾಗಿದೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಕೇವಲ ಕಲಬುರಗಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಮಾತ್ರ ಅನಧಿಕೃತ ಶಾಲೆಗಳು ಕಂಡುಬಂದಿವೆ. ಶಿಕ್ಷಣ ಇಲಾಖೆ ಅಧಿಕಾರಿಗಳು ಹಲವಾರು ಕಾರಣಗಳನ್ನು ನೀಡಿ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಿದ್ದು, ಇಂತಹ ಶಾಲೆಗಳ ವಿರುದ್ಧ ಕ್ರಮಕ್ಕೂ ಶಿಕ್ಷಣ ಇಲಾಖೆ ಮುಂದಾಗಿದೆ.

ಶಾಲೆ ನೋಂದಣಿ ಮಾಡದೆ ನಡೆಸುತ್ತಿರುವುದು, ನೋಂದಣಿ ಇಲ್ಲದೆ ಅನಧಿಕೃತವಾಗಿ ಉನ್ನತೀಕರಿಸಿದ ತರಗತಿಗಳನ್ನು ನಡೆಸುತ್ತಿರುವುದು, ರಾಜ್ಯ ಪಠ್ಯಕ್ರಮಕ್ಕೆ ಅನುಮತಿ ಪಡೆದು ಇತರೆ ಪಠ್ಯಕ್ರಮದಲ್ಲಿ ಬೋಧಿಸುತ್ತಿರುವುದು, ಅನಧಿಕೃತ ಮಾಧ್ಯಮದಲ್ಲಿ ನಡೆಯುತ್ತಿರುವುದು, ಅನುಮತಿ ಇಲ್ಲದೆ ಸ್ಥಳಾಂತರಗೊಳಿಸಿರುವುದು, ಅನುಮತಿ ಇಲ್ಲದೆ ಹಸ್ತಾಂತರ ಮಾಡಿರುವುದು, ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿ ನಂತರ ಅನಧಿಕೃತವಾಗಿ ಅದೇ ಕಟ್ಟಡದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಮುಂದುವರಿಯುವುದು ಹಾಗೂ ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಇತರೆ ಪುಸ್ತಕ ಉಪಯೋಗಿಸುತ್ತಿರುವ ಶಾಲೆ ಎಂದು ಒಟ್ಟು 9 ಅಂಶಗಳೊಂದಿಗೆ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಲಾಗಿದೆ.



ಕಲಬುರಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ.

ಅನಧಿಕೃತ ಶಾಲೆಗಳ ಸಂಖ್ಯೆ

| ಜಿಲ್ಲೆ | ಪ್ರಾಥಮಿಕ | ಪ್ರೌಢ |
|---|---|---|
| ಕಲಬುರಗಿ | 41 | 16 |
| ರಾಯಚೂರು | 09 | 05 |
| ಬೀದರ್ | 28 | 04 |
| ಒಟ್ಟು | 78 | 25 |

**ಅನಧಿಕೃತ ಹೇಗೆ**

- ಅನುಮತಿ ಪಡೆಯದೆ ನಡೆಸುತ್ತಿರುವ ಶಾಲೆಗಳು- ಪ್ರಾಥಮಿಕ 17, ಪ್ರೌಢ 15
- ಅನಧಿಕೃತವಾಗಿ ಉನ್ನತೀಕರಿಸಿದ ತರಗತಿ ನಡೆಸುತ್ತಿರುವ ಶಾಲೆ- ಪ್ರಾಥಮಿಕ 3
- ಅನಧಿಕೃತ ಮಾಧ್ಯಮ ಶಾಲೆಗಳು- ಪ್ರಾಥಮಿಕ 2
- ಅನುಮತಿ ಇಲ್ಲದೆ ಸ್ಥಳಾಂತರಿಸಿದ ಶಾಲೆಗಳು- ಪ್ರಾಥಮಿಕ 40, ಪ್ರೌಢ 10
- ಅನುಮತಿ ಇಲ್ಲದೆ ಹಸ್ತಾಂತರಿಸಿದ ಶಾಲೆಗಳು- ಪ್ರಾಥಮಿಕ 14

**ಪ್ರೈಮರಿ ಶಾಲೆಗಳೇ ಹೆಚ್ಚು ಅನಧಿಕೃತ:** ಪ್ರಾಥಮಿಕ ಶಾಲೆಗಳು ಇತ್ತೀಚೆಗೆ ನಾಯಿ ಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಇದಕ್ಕೆ ಉದಾಹರಣೆ ಎಂಬಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಶಾಲೆಗಳು 78 ಅನಧಿಕೃತ ಶಾಲೆಗಳಿವೆ. ಅದೇರೀತಿ ಪ್ರೌಢ ಶಾಲೆಗಳು 25 ಇವೆ ಎಂದು ಶಿಕ್ಷಣ ಇಲಾಖೆ ಗುರುತಿಸಿದೆ.

**ಕಲಬುರಗಿಯಲ್ಲಿನ 57 ಅನಧಿಕೃತ ಶಾಲೆ**

ಜಿಲ್ಲೆಯಲ್ಲಿ ಬರೋಬ್ಬರಿ 57 ಅನಧಿಕೃತ ಶಾಲೆಗಳು ಇರುವುದು ಬಹಿರಂಗವಾಗಿದೆ. ಇದರಲ್ಲಿ ಶಾಲೆ ನೋಂದಣಿಯೇ ಇಲ್ಲದೆ 17 ಪ್ರಾಥಮಿಕ, 15 ಪ್ರೌಢ ಶಾಲೆಗಳು ನಡೆಯುತ್ತಿದ್ದು ಅನಧಿಕೃತ ಮಾಧ್ಯಮದಲ್ಲಿ 2 ಶಾಲೆ, ನೋಂದಣಿ ಇಲ್ಲದೆ ಅನಧಿಕೃತ ಉನ್ನತೀಕರಿಸಿದ ತರಗತಿಗಳನ್ನು ನಡೆಸುತ್ತಿರುವ 1 ಶಾಲೆ, ಅನುಮತಿ ಇಲ್ಲದೆ ಪ್ರಾಥಮಿಕ 1, ಪ್ರೌಢ 1 ಶಾಲೆಗಳು ಸ್ಥಳಾಂತರ, ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿದ ನಂತರ ಅನಧಿಕೃತವಾಗಿ ಅದೇ ಕಟ್ಟಡದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಮುಂದುವರಿಸುತ್ತಿರುವ ಶಾಲೆಗಳ ಸಂಖ್ಯೆ 1, ರಾಜ್ಯ ಪಠ್ಯಕ್ರಮ ಪರವಾನಗಿ ಪಡೆದು ಇತರೆ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಶಾಲೆ 1 ಸೇರಿ ಒಟ್ಟು 57 ಶಾಲೆಗಳು ಕಲಬುರಗಿ ಜಿಲ್ಲೆಯಲ್ಲಿರುವುದು ಬಹಿರಂಗವಾಗಿದೆ.

**4 ಜಿಲ್ಲೆಗಳಲ್ಲಿ ಅನಧಿಕೃತ ಶಾಲೆಗಳಿಲ್ಲ**

ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ, ವಿಜಯನಗರ, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಅನಧಿಕೃತ ಶಾಲೆಗಳು ಇಲ್ಲ. ಕಲಬುರಗಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಮಾತ್ರ ಈ ರೀತಿಯ ಶಾಲೆಗಳಿರುವುದು ಪತ್ತೆಯಾಗಿದೆ.

**ಅನುಮತಿ ಇಲ್ಲದೆ 50 ಶಾಲೆ ಸ್ಥಳಾಂತರ**

ಶಿಕ್ಷಣ ಇಲಾಖೆಯ ಅನುಮತಿಯನ್ನೇ ಪಡೆಯದೆ 50 ಶಾಲೆಗಳನ್ನು ಬೇರೆಡೆ ಸ್ಥಳಾಂತರಿಸಲಾಗಿದೆ. ಇದರಲ್ಲಿ ಪ್ರಾಥಮಿಕ 40 ಶಾಲೆಗಳು, ಪ್ರೌಢ ಶಾಲೆಗಳು 10 ಸೇರಿವೆ. ಪ್ರಾಥಮಿಕ ಶಾಲೆಗಳು ಕಲಬುರಗಿಯಲ್ಲಿ 18, ಬೀದರ್ ಜಿಲ್ಲೆಯಲ್ಲಿ 22 ಸ್ಥಳಾಂತರಗೊಂಡಿವೆ. ಅದೇರೀತಿ ಪ್ರೌಢಶಾಲೆ ವಿಭಾಗದಲ್ಲಿ ಕಲಬುರಗಿ ಜಿಲ್ಲೆಯಲ್ಲಿ 1 ಶಾಲೆ, ರಾಯಚೂರು ಜಿಲ್ಲೆಯಲ್ಲಿ 5 ಶಾಲೆ, ಬೀದರ್ ಜಿಲ್ಲೆಯಲ್ಲಿ 4 ಶಾಲೆಗಳು ಸ್ಥಳಾಂತರಗೊಂಡಿವೆ.

ನೋಂದಣಿ ಮಾಡಿಸದೆ, ಅನುಮತಿ ಪಡೆಯದಿರುವ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
- ಅಶೋಕ ಎಸ್. ಅಪರ ಶಿಕ್ಷಣ ಆಯುಕ್ತ

ಜಿಲ್ಲೆಯ 10 ಶಾಲೆಗಳನ್ನು ಮುಚ್ಚಲು ಆದೇಶಿಸಲಾಗಿದೆ. ಉಳಿದ ಶಾಲೆಗಳಿಗೆ ನೋಟಿಸ್‌ಗಳನ್ನು ನೀಡಲಾಗಿದೆ. ಅನಧಿಕೃತ ಶಾಲೆಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು.
- ಸಕ್ರೆಪ್ಪಗೌಡ ಬಿರಾದಾರ, ಡಿಡಿಪಿಐ ಕಲಬುರಗಿ

2. ಈ ಮೇಲೆ ಓದಲಾದ ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆಯ ಲೇಖನವನ್ನು ಪರಿಶೀಲಿಸಲಾಗಿ, ರಾಯಚೂರು ಜಿಲ್ಲೆಯಲ್ಲಿ ಶಾಲೆಗಳನ್ನು ನೊಂದಣಿ ಮಾಡದೇ, ನಡೆಸುತ್ತಿರುವುದು, ನೊಂದಣಿ ಇಲ್ಲದೆ ಅನಧಿಕೃತವಾಗಿ ಶಾಲೆ ಉನ್ನತೀಕರಿಸದೇ ತರಗತಿಗಳನ್ನು ನಡೆಸುತ್ತಿರುವುದು, ರಾಜ್ಯ ಪಠ್ಯ ಕ್ರಮಕ್ಕೆ ಅನುಮತಿ ಪಡೆದು ಇತರೆ ಪಠ್ಯಕ್ರಮದಲ್ಲಿ ಬೋಧಿಸುತ್ತಿರುವುದು, ಅನಧಿಕೃತ ಮಾಧ್ಯಮದಲ್ಲಿ ನಡೆಯುತ್ತಿರುವುದು, ಅನುಮತಿ ಇಲ್ಲದೆ ಸ್ಥಳಾಂತರ ಗೊಳಿಸಿರುವುದು, ಅನುಮತಿ ಇಲ್ಲದೆ ಹಸ್ತಾಂತರ ಮಾಡಿರುವುದು, ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿ ನಂತರ ಅನಧಿಕೃತವಾಗಿ ಅದೇ ಕಟ್ಟಡದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಮುಂದುವರಿಯುವುದು ಹಾಗೂ ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಇತರೆ ಪುಸ್ತಕ ಉಪಯೋಗಿಸುತ್ತಿರುವ ಶಾಲೆ ಎಂದು ಒಟ್ಟು ೯ ಅಂಶಗಳೊಂದಿಗೆ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಲಾಗಿದೆ ಎಂದು ವರದಿ ಮಾಡಿರುವುದು ಕಂಡು ಬರುತ್ತದೆ. ರಾಯಚೂರು ಜಿಲ್ಲೆಯಲ್ಲಿ ೦೯ ಪ್ರಾಥಮಿಕ ಶಾಲೆಗಳು, ೦೫ ಪ್ರೌಢಶಾಲೆಗಳು ಒಟ್ಟು 14 ಅನಧಿಕೃತ ಶಾಲೆಗಳು ಇರುತ್ತವೆ ಎಂದು ವರದಿ ಮಾಡಿರುವುದು ಕಂಡು ಬರುತ್ತದೆ.

೩. ಈ ಹಿನ್ನೆಲೆಯಲ್ಲಿ, ನೊಂದಣಿ ಮಾಡಿಸದೇ ಅನುಮತಿ ಪಡೆಯದಿರುವ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಶ್ರೀ ಅಶೋಕ್ .ಎಸ್. ಅಪರ ಶಿಕ್ಷಣ ಆಯುಕ್ತರು, ಕಲಬುರಗಿ ಇವರು ಹೇಳಿಕೆ ನೀಡಿರುವುದು ಕಂಡು ಬರುತ್ತದೆ.

4. ಮುಖ್ಯವಾಗಿ ಸದರಿ ದಿನ ಪತ್ರಿಕೆಯ ವರದಿಯಿಂದ ರಾಯಚೂರು ಜಿಲ್ಲೆಯಲ್ಲಿ ಅನಧಿಕೃತ ಶಾಲೆಗಳು ಅಸ್ತಿತ್ವದಲ್ಲಿದ್ದರೂ ಸಹ, ಕರ್ನಾಟಕ ಶಿಕ್ಷಣ ಕಾಯ್ದೆ 1983 ರಲ್ಲಿ ಉಪಬಂಧಿಸಿರುವಂತೆ ಕಾಯ್ದೆಯಲ್ಲಿ ನಿಗಧಿ ಪಡಿಸಿದ ಷರತ್ತುಗಳನ್ನು ಉಲ್ಲಂಘಿಸಿ, ಅನಧಿಕೃತವಾಗಿ ಶಾಲೆಗಳನ್ನು ನಡೆಸುವುದು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ದಂಡನಾರ್ಹ ಕೃತ್ಯವಾಗಿದ್ದರೂ ಸಹ, ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಅನಧಿಕೃತ ಶಾಲೆಗಳನ್ನು ನಡೆಸುವವರ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಧ್ಯೇಯೋದ್ದೇಶವು ಸಾರ್ವಜನಿಕರ ಸಮಸ್ಯೆಯನ್ನು ಬಗೆಹರಿಸುವುದಲ್ಲದೇ ರಾಜ್ಯದ ಆಡಳಿತದಲ್ಲಿ ಸಾರ್ವಜನಿಕ ಅಧಿಕಾರಿಗಳು/ನೌಕರರ ದುರಾಡಳಿತ/ನಿರ್ಲಕ್ಷತೆಯನ್ನು ತಡೆಯುವುದಾಗಿರುತ್ತದೆ. ಹೀಗಿರುವಾಗ, ಅನಧಿಕೃತ ಶಾಲೆಗಳಿಂದ ವಿದ್ಯಾರ್ಥಿಗಳಿಗೆ ಉಂಟಾಗುವ ತೊಂದರೆಯನ್ನು ನಿವಾರಿಸುವ ಸಲುವಾಗಿ, ಸಂಬಂಧಪಟ್ಟ ಅನಧಿಕೃತ ಶಾಲೆಗಳನ್ನು ನಡೆಸುವವರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸುವಲ್ಲಿ ಬೇಜವಾಬ್ದಾರಿತನ/ನಿಷ್ಕಾಳಜಿತನ ತೋರಿರುವ ಸಾರ್ವಜನಿಕ ಅಧಿಕಾರಿ/ನೌಕರರ ವರ್ತನೆಯು ಕ.ಲೋ.ಕಾಯ್ದೆ 1984 ಕಲಂ 2(10) ರಡಿಯಲ್ಲಿ ಪರಿಭಾಷಿಸಿರುವಂತೆ **"ದುರಾಡಳಿತ"** ದ ಪರಿಭಾಷೆಯ ವ್ಯಾಪ್ತಿಗೆ ಒಳಪಡುವುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಕ್ರಮ ಕೈಗೊಳ್ಳುವುದು ಸೂಕ್ತವು ಹಾಗೂ ಅವಶ್ಯಕವು ಆಗಿರುತ್ತದೆ.

6. ಆದ್ದರಿಂದ, ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ ದಿನಾಂಕ:18/08/2023ರ ಉಲ್ಲೇಖಿತ ವರದಿಯನ್ನು ಮೂಲ ವರದಿ ಎಂದು ಪರಿಗಣಿಸಿ, ಕ.ಲೋ.ಕಾಯ್ದೆ 1984ರ ಕಲಂ 7(2) & ಕಲಂ 9(3)(ಎ)ರಡಿಯಲ್ಲಿ ದತ್ತವಾದ ಅಧಿಕಾರದಿಂದ, ಸದರಿ ದಿನ ಪತ್ರಿಕೆಯಲ್ಲಿ ಪ್ರಕಟವಾದ ಅನಧಿಕೃತ ಶಾಲೆಗಳಿಗೆ ಸಂಬಂಧಿಸಿದಂತೆ, ತನಿಖೆ ಕೈಗೊಳ್ಳುವ ಸಲುವಾಗಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಈ ಕೆಳಕಂಡಂತೆ ಆದೇಶಿಸುತ್ತಿದ್ದೇನೆ:-

**ಎದುರುದಾರರ ವಿವರ:**

| | |
|---|---|
| 1. | **ಉಪನಿರ್ದೇಶಕರು,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ರಾಯಚೂರು ಜಿಲ್ಲೆ.** |

***i.*** *ಎದುರುದಾರರಿಗೆ ಈ ಆದೇಶದ ಪ್ರತಿ ಮತ್ತು ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆ ದಿನಾಂಕ:18/08/2023ರಂದು ಪ್ರಕಟವಾದ ವರದಿಯ ಪ್ರತಿಯನ್ನು ಕಳುಹಿಸಿ,*

ರಾಯಚೂರು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ, ಈ ಕೆಳಗೆ ಸೂಚಿಸಿರುವಂತೆ ಪೂರಕ ದಾಖಲಾತಿಗಳೊಂದಿಗೆ ವರದಿ ಸಲ್ಲಿಸಲು ಆದೇಶಿಸಿದೆ:-

| ಕ್ರ.ಸಂ | ವಿವರಗಳು |
|---|---|
| 1. | ರಾಯಚೂರು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಖಾಸಗಿ ಶಾಲೆಗಳ ವಿವರ |
| 2. | ರಾಯಚೂರು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಅನಧಿಕೃತ ಖಾಸಗಿ ಶಾಲೆಗಳ ವಿವರ |
| 3. | ರಾಯಚೂರು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಅನಧಿಕೃತ ಖಾಸಗಿ ಶಾಲೆಗಳ ವಿರುದ್ಧ 2020 ರಿಂದ 2023ರ ಪ್ರಸ್ತುತ ದಿನಾಂಕದವರೆಗೆ ತಾವು ಕೈಗೊಂಡಿರುವ ಕ್ರಮದ ವರದಿ |

***ii.*** ಆದೇಶದ ಪ್ರತಿಯನ್ನು ಮತ್ತು ವಿಜಯ ಕರ್ನಾಟಕ, ಕನ್ನಡ ದಿನಪತ್ರಿಕೆ ದಿನಾಂಕ:18/08/2023 ರಲ್ಲಿ ಪ್ರಕಟವಾದ ವರದಿ ಪ್ರತಿಯನ್ನು **1. ಗೌರವಾನ್ವಿತ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ರಾಯಚೂರು ಜಿಲ್ಲೆ, 2. ಗೌರವಾನ್ವಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು, 3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಜಿಲ್ಲೆ, ಕಲಬುರಗಿ** ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸುವಂತೆ ಆದೇಶಿಸಿದೆ.

31-10-23
K.N. Phanindra
29/8/23

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

## ನೋಂದಣಿ ಇಲ್ಲದೆ ನಡೆಯುತ್ತಿವೆ ಶಾಲೆ | ಕನ್ನಡ ಮಾಧ್ಯಮ ಹೆಸರಲ್ಲಿ ಇಂಗ್ಲಿಷ್ ಮಾಧ್ಯಮ ಬೋಧನೆ

# ಕಲ್ಯಾಣದಲ್ಲಿವೆ 103 ಅನಧಿಕೃತ ಶಾಲೆ!

**ವೆಂಕಟೇಶ ಏಗನೂರು** ಕಲಬುರಗಿ

Venkatesh.narasappa@timesgroup.com

ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಬರೋಬ್ಬರಿ 103 ಅನಧಿಕೃತ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇಂತಹ ಶಾಲೆಗಳ ವಿರುದ್ಧ ಶಿಕ್ಷಣ ಇಲಾಖೆ ಕ್ರಮಕ್ಕೆ ಮುಂದಾಗಿದೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಕೇವಲ ಕಲಬುರಗಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಮಾತ್ರ ಅನಧಿಕೃತ ಶಾಲೆಗಳು ಕಂಡುಬಂದಿವೆ. ಶಿಕ್ಷಣ ಇಲಾಖೆ ಅಧಿಕಾರಿಗಳು ಹಲವಾರು ಕಾರಣಗಳನ್ನು ನೀಡಿ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಿದ್ದು, ಇಂತಹ ಶಾಲೆಗಳ ವಿರುದ್ಧ ಕ್ರಮಕ್ಕೂ ಶಿಕ್ಷಣ ಇಲಾಖೆ ಮುಂದಾಗಿದೆ.

ಶಾಲೆ ನೋಂದಣಿ ಮಾಡದೆ ನಡೆಸುತ್ತಿರುವುದು, ನೋಂದಣಿ ಇಲ್ಲದೆ ಅನಧಿಕೃತವಾಗಿ ಉನ್ನತೀಕರಿಸಿದ ತರಗತಿಗಳನ್ನು ನಡೆಸುತ್ತಿರುವುದು, ರಾಜ್ಯ ಪಠ್ಯಕ್ರಮಕ್ಕೆ ಅನುಮತಿ ಪಡೆದು ಇತರೆ ಪಠ್ಯಕ್ರಮದಲ್ಲಿ ಬೋಧಿಸುತ್ತಿರುವುದು, ಅನಧಿಕೃತ ಮಾಧ್ಯಮದಲ್ಲಿ ನಡೆಯುತ್ತಿರುವುದು, ಅನುಮತಿ ಇಲ್ಲದೆ ಸ್ಥಳಾಂತರಗೊಳಿಸಿರುವುದು, ಅನುಮತಿ ಇಲ್ಲದೆ ಹಸ್ತಾಂತರ ಮಾಡಿರುವುದು, ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿ ನಂತರ ಅನಧಿಕೃತವಾಗಿ ಅದೇ ಕಟ್ಟಡದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಮುಂದುವರಿಯುವುದು ಹಾಗೂ ರಾಜ್ಯ ಪಠ್ಯಕ್ರಮದಲ್ಲಿ ಅನುಮತಿ ಪಡೆದು ಇತರೆ ಪುಸ್ತಕ ಉಪಯೋಗಿಸುತ್ತಿರುವ ಶಾಲೆ ಎಂದು ಒಟ್ಟು 9 ಅಂಶಗಳೊಂದಿಗೆ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಲಾಗಿದೆ.



ಕಲಬುರಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ.

### ಅನಧಿಕೃತ ಶಾಲೆಗಳ ಸಂಖ್ಯೆ

| ಜಿಲ್ಲೆ | ಪ್ರಾಥಮಿಕ | ಪ್ರೌಢ |
|---|---|---|
| ಕಲಬುರಗಿ | 41 | 16 |
| ರಾಯಚೂರು | 09 | 05 |
| ಬೀದರ್ | 28 | 04 |
| ಒಟ್ಟು | 78 | 25 |

### ಅನಧಿಕೃತ ಹೇಗೆ

- ಅನುಮಪತಿ ಪಡೆಯದೆ ನಡೆಸುತ್ತಿರುವ ಶಾಲೆಗಳು- ಪ್ರಾಥಮಿಕ 17, ಪ್ರೌಢ 15
- ಅನಧಿಕೃತವಾಗಿ ಉನ್ನತೀಕರಿಸಿದ ತರಗತಿ ನಡೆಸುತ್ತಿರುವ ಶಾಲೆ- ಪ್ರಾಥಮಿಕ 3
- ಅನಧಿಕೃತ ಮಾಧ್ಯಮ ಶಾಲೆಗಳು- ಪ್ರಾಥಮಿಕ 2
- ಅನುಮತಿ ಇಲ್ಲದೆ ಸ್ಥಳಾಂತರಿಸಿದ ಶಾಲೆಗಳು- ಪ್ರಾಥಮಿಕ 40, ಪ್ರೌಢ 10
- ಅನುಮತಿ ಇಲ್ಲದೆ ಹಸ್ತಾಂತರಿಸಿದ ಶಾಲೆಗಳು- ಪ್ರಾಥಮಿಕ 14

**ಪ್ರೈಮರಿ ಶಾಲೆಗಳೇ ಹೆಚ್ಚು ಅನಧಿಕೃತ:** ಪ್ರಾಥಮಿಕ ಶಾಲೆಗಳು ಇತ್ತೀಚೆಗೆ ನಾಯಿ ಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಇದಕ್ಕೆ ಉದಾಹರಣೆ ಎಂಬಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಶಾಲೆಗಳು 78 ಅನಧಿಕೃತ ಶಾಲೆಗಳಿವೆ. ಅದೇರೀತಿ ಪ್ರೌಢ ಶಾಲೆಗಳು 25 ಇವೆ ಎಂದು ಶಿಕ್ಷಣ ಇಲಾಖೆ ಗುರುತಿಸಿದೆ.

**ಕಲಬುರಗಿಯಲ್ಲಿವೆ 57 ಅನಧಿಕೃತ ಶಾಲೆ**

ಜಿಲ್ಲೆಯಲ್ಲಿ ಬರೋಬ್ಬರಿ 57 ಅನಧಿಕೃತ ಶಾಲೆಗಳು ಇರುವುದು ಬಹಿರಂಗವಾಗಿದೆ. ಇದರಲ್ಲಿ ಶಾಲೆ ನೋಂದಣಿಯೇ ಇಲ್ಲದೆ 17 ಪ್ರಾಥಮಿಕ, 15 ಪ್ರೌಢ ಶಾಲೆಗಳು ನಡೆಯುತ್ತಿದ್ದು, ಅನಧಿಕೃತ ಮಾಧ್ಯಮದಲ್ಲಿ 2 ಶಾಲೆ, ನೋಂದಣಿ ಇಲ್ಲದೆ ಅನಧಿಕೃತ ಉನ್ನತೀಕರಿಸಿದ ತರಗತಿಗಳನ್ನು ನಡೆಸುತ್ತಿರುವ 1 ಶಾಲೆ, ಅನುಮತಿ ಇಲ್ಲದೆ ಪ್ರಾಥಮಿಕ 1, ಪ್ರೌಢ 1 ಶಾಲೆಗಳು ಸ್ಥಳಾಂತರ, ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿದ ನಂತರ ಅನಧಿಕೃತವಾಗಿ ಅದೇ ಕಟ್ಟಡದಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಮುಂದುವರಿಸುತ್ತಿರುವ ಶಾಲೆಗಳ ಸಂಖ್ಯೆ 1, ರಾಜ್ಯ ಪಠ್ಯಕ್ರಮ ಪರವಾನಗಿ ಪಡೆದು ಇತರೆ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಶಾಲೆ 1 ಸೇರಿ ಒಟ್ಟು 57 ಶಾಲೆಗಳು ಕಲಬುರಗಿ ಜಿಲ್ಲೆಯಲ್ಲಿರುವುದು ಬಹಿರಂಗವಾಗಿದೆ.

**4 ಜಿಲ್ಲೆಗಳಲ್ಲಿ ಅನಧಿಕೃತ ಶಾಲೆಗಳಿಲ್ಲ**

ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ, ವಿಜಯನಗರ, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಅನಧಿಕೃತ ಶಾಲೆಗಳು ಇಲ್ಲ, ಕಲಬುರಗಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಮಾತ್ರ ಈ ರೀತಿಯ ಶಾಲೆಗಳಿರುವುದು ಪತ್ತೆಯಾಗಿವೆ.

### ಅನುಮತಿ ಇಲ್ಲದೆ 50 ಶಾಲೆ ಸ್ಥಳಾಂತರ

ಶಿಕ್ಷಣ ಇಲಾಖೆಯ ಅನುಮತಿಯನ್ನೇ ಪಡೆಯದೆ 50 ಶಾಲೆಗಳನ್ನು ಬೇರೆಡೆ ಸ್ಥಳಾಂತರಿಸಲಾಗಿದೆ. ಇದರಲ್ಲಿ ಪ್ರಾಥಮಿಕ 40 ಶಾಲೆಗಳು, ಪ್ರೌಢ ಶಾಲೆಗಳು 10 ಸೇರಿವೆ. ಪ್ರಾಥಮಿಕ ಶಾಲೆಗಳು ಕಲಬುರಗಿಯಲ್ಲಿ 18, ಬೀದರ್ ಜಿಲ್ಲೆಯಲ್ಲಿ 22 ಸ್ಥಳಾಂತರಗೊಂಡಿವೆ. ಅದೇರೀತಿ ಪ್ರೌಢಶಾಲೆ ವಿಭಾಗದಲ್ಲಿ ಕಲಬುರಗಿ ಜಿಲ್ಲೆಯಲ್ಲಿ 1 ಶಾಲೆ, ರಾಯಚೂರು ಜಿಲ್ಲೆಯಲ್ಲಿ 5 ಶಾಲೆ, ಬೀದರ್ ಜಿಲ್ಲೆಯಲ್ಲಿ 4 ಶಾಲೆಗಳು ಸ್ಥಳಾಂತರಗೊಂಡಿವೆ.

ನೋಂದಣಿ ಮಾಡಿಸದೆ, ಅನುಮತಿ ಪಡೆಯದಿರುವ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

**- ಅಶೋಕ ಎಸ್.** ಅಪರ ಶಿಕ್ಷಣ ಆಯುಕ್ತ

ಜಿಲ್ಲೆಯ 10 ಶಾಲೆಗಳನ್ನು ಮುಚ್ಚಲು ಆದೇಶಿಸಲಾಗಿದೆ. ಉಳಿದ ಶಾಲೆಗಳಿಗೆ ನೋಟಿಸ್‌ಗಳನ್ನು ನೀಡಲಾಗಿದೆ. ಅನಧಿಕೃತ ಶಾಲೆಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು.

**- ಸಕ್ರೆಪ್ಪಗೌಡ ಬಿರಾದಾರ**
ಡಿಡಿಪಿಐ ಕಲಬುರಗಿ

# ಹೈಕೋರ್ಟ್‌ನಲ್ಲಿ ನಾಡಗೀತೆ ಕಲರವ

**ವಿಕ ಸುದ್ದಿಲೋಕ** ಬೆಂಗಳೂರು

ಹೈಕೋರ್ಟ್‌ನ ಕೋರ್ಟ್ ಹಾಲ್ 7ರಲ್ಲಿ ಗುರುವಾರ ಮಧ್ಯಾಹ್ನ ಹೆಸರಾಂತ ಗಾಯಕರು ನಾನಾ ರಾಗಗಳಲ್ಲಿ 'ಜಯಭಾರತ ಜನನಿಯ ತನುಜಾತೆ' ನಾಡಗೀತೆಯನ್ನು ಹಾಡುವ ಮೂಲಕ ಕನ್ನಡದ ಕಲರವ ಮೊಳಗಿಸಿದರು.

## ಕೋರ್ಟ್ ಮೆಟ್ಟಿಲೇರಿದ್ದಕ್ಕೆ ಜಿಜ್ಞಾಸೆ

ನಾನಾ ರಾಗಗಳಲ್ಲಿ ನಾಡಗೀತೆ ಆಲಿಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ''ಅನಂತಸ್ವಾಮಿ, ಅಶ್ವತ್ಥ್ ಇಬ್ಬರೂ ದಿಗ್ಗಜರೇ. ಅತಿರಥ ಮಹಾರಥರೇ,'' ಎಂದು ಶ್ಲಾಘಿಸಿದರು. ''ಸಂಗೀತ ಎಂಬುದು ಅತಿದೊಡ್ಡ ಶಾಸ್ತ್ರ ಮತ್ತು ಅಧ್ಯಯನದ ವಿಷಯ. ಮೇಲಿರುವ ರಸಋಷಿ ತಮ್ಮ ಕವಿತೆಗೆ ಕಲಾತಪಸ್ವಿಗಳು ಇಷ್ಟೊಂದು ಜಿಜ್ಞಾಸೆ ವ್ಯಕ್ತಪಡಿಸಿ ಕೋರ್ಟ್ ಮೆಟ್ಟಿಲೇರಿರುವುದನ್ನು ಕಂಡು ಏನೆಂದುಕೊಳ್ಳುತ್ತಾರೆಯೋ ಏನೋ'' ಎಂದು ಲಘು ಧಾಟಿಯಲ್ಲಿ ಹೇಳಿದರು.

# ಮಾದಾರ ಚನ್ನಯ್ಯ ಶ್ರೀಗಳಿಗೆ ಮಾತೃ ವಿಯೋಗ



**ಚಿತ್ರದುರ್ಗ:** ಶಿವಶರಣ ಮಾದಾರ ಚನ್ನಯ್ಯ ಮಠದ ಮಾದಾರ ಚನ್ನಯ್ಯ ಶ್ರೀಗಳ ಪೂರ್ವಾಶ್ರಮದ ತಾಯಿ ಗಂಗಮ್ಮ (85) ಗುರುವಾರ ಬೆಳಗ್ಗೆ ವಯೋ ಸಹಜ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಸಂಸದ ಜಿ.ಎಂ.ಸಿದ್ದೇಶ್ವರ, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್.ಚಂದ್ರಪ್ಪ, ಹರಿಹರ ಕ್ಷೇತ್ರದ ಶಾಸಕ ಬಿ.ಪಿ.ಹರೀಶ್ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಹಿರೇಕಂದವಾಡಿಯ ತೋಟದ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು. ಬಸವಮೂರ್ತಿ ಮಾದಾರಚನ್ನಯ್ಯ ಸ್ವಾಮೀಜಿ ಇದ್ದರು.